आचार्यहृदय

# श्रीभाष्य - तात्पर्य - रत्नावळी



श्री यतिराज - सम्मत् कुमारः श्रीरङ्गपट्टणम्

भगवान् वेदव्यासः, भारत-ब्रम्हसूत्रकर्ता महाविष्णुः

सम्यङ्न्यायकलापेन महता भारतेन च ।
उपबृम्हितवेदाय नमो व्यासाय विष्णवे ॥

विशदवाक्-प्रकाशनम् ३८

# आचार्यहृदय -
# श्रीभाष्यतात्पर्यरत्नावळी
## कन्नड-भूमिकासहिता

**प्रबन्धा**
**तिरुनारायणपुरं-अरैयर् श्रीरामशर्मा**
उभयन्यायवेदान्तालङ्कारः राष्ट्रभाषाविशारदः कन्नडपण्डितः
एम्. ए. संस्कृत-शिक्षाशास्त्री
संस्कृत-प्राकृत-कन्नड-तमिळु-हिन्दी-पञ्चभाषाकवितावल्लभः
सर्वकारीयसंस्कृतकालेजनिवृत्तप्रांशुपालः

शालिवाहनशक १९२६ पार्थिववर्षः

प्रकाशकः
**श्री. न. सिम्हः**
नं २८५, अप्पुनीरुबाविबीदि, मेलुकोटे - पि. नं. ५७१४३१
मण्डयजिल्ला, कर्णाटकराज्यम्, भारतम्

Vishadavak Prakashanam 38

# Acharyahrudaya Sribhashya Tatparya Ratnavalee

Releasing on 11-12-2006
(Geetha Jayanthee and Parthiva Kaishika Dwadashee
ending with Shree Bhashya Pravachanam)


| | |
|---|---|
| *Kannada Bhumika* | *3 -15* |
| *Sanskrit Text* | *16 - 32* |



| | | |
|---|---|---|
| Author © | : | **Areyar Sri Rama Sharma Swamy**<br>No. 50(41), Swimming Pool Extension<br>Malleswaram, Bangalore - 560 003 |
| Phone | : | 23565339 |
| Copies | : | 500 |
| Price | : | **Rs. 64/-** |
| Printed at | : | **Navbharath Enterprises**<br>No. 10, Sirur Park 'B' Street<br>Seshadripuram, Malleswaram<br>Bangalore - 560 020<br>Phone : 080-23364142, 23364682<br>E-mail : navbarat@gmail.com |
| Publisher | : | **S.N. Simha**<br>285, Uppuneerubhavi Beedhi<br>Melkote - 571431<br>Mandya District, Karnataka, India<br>Mobile : 9448913269<br>E-mail : simha_sn@yahoo.co.in |

# ಆಚಾರ್ಯ ಹೃದಯ - ಶ್ರೀಭಾಷ್ಯ ತಾತ್ಪರ್ಯರತ್ನಾವಳಿ

## ಭೂಮಿಕೆ

ಲೇಖಕರು - ಶ್ರೀ.ಉ.ವೇ. ಅರೈಯರ್ ಶ್ರೀರಾಮಶರ್ಮಾ ಸ್ವಾಮಿ

### ೧. ದ್ವಯ ಮಂತ್ರಾರ್ಥ ಮುಖ್ಯ

ಭಗವದ್‌ರಾಮಾನುಜರ ದರ್ಶನಾರ್ಥಗಳೆಲ್ಲವೂ, ಮೂಲತಃ **ಮಂತ್ರರತ್ನ** ಎಂಬ ದ್ವಯಮಂತ್ರದ ಅರ್ಥಗಳಿಂದ ಪರಿಪೂರ್ಣವಾಗಿವೆ. ಈ ಮಂತ್ರವು ಪ್ರಸಿದ್ಧವಾದ ಶರಣಾಗತಿಮಂತ್ರ. ಇದನ್ನು ದೀಕ್ಷಾಕ್ರಮದಿಂದ ಗುರುಗಳ ಮೂಲಕ ಪಡೆದವರಿಗೆ ಮಾತ್ರ ಶ್ರೀಭಾಷ್ಯ-ಭಗವದ್‌ವಿಷಯಾದಿ ಗ್ರಂಥಗಳ ಉಪದೇಶ-ಅಧ್ಯಯನ-ಅಧ್ಯಾಪನಾದಿಗಳ ಅವಕಾಶವು ಸಂಪ್ರದಾಯಕ್ರಮದಿಂದ ಸಿದ್ಧವಾಗಿದೆ.

ದ್ವಯಾರ್ಥವು ಶ್ರೀವೈಷ್ಣವರಿಗೆ ಅತಿ ಮುಖ್ಯ. ಎರಡು ವಾಕ್ಯವಾಗಿರುವ ದ್ವಯಮಂತ್ರದ ಉತ್ತರವಾಕ್ಯದ ಅರ್ಥದಲ್ಲಿ ನಿಷ್ಠೆಯು ಅತ್ಯಂತ ಮುಖ್ಯ. ನಮ್ಮ ಪೂರ್ವಾಚಾರ್ಯರೆಲ್ಲರೂ ದ್ವಯೈಕನಿಷ್ಠರು. ದ್ವಯಾರ್ಥಕ್ಕೆ ಅನುಸಾರವಾದ ವಿಶೇಷ ಆಚಾರಗಳನ್ನು ದೃಢವಾಗಿ ಇಟ್ಟುಕೊಂಡವರು. **ದ್ವಯಂ ಅರ್ಥಾನುಸಂಧಾನೇನ ಸಹ ಸದೈವಂ ವಕ್ತಾ ಯಾವಚ್ಛರೀರಪಾತಂ ಅತ್ರೈವ ಶ್ರೀರಂಗೇ ಸುಖಮಾಸ್ಸ್ವ** ಎಂಬ ಭಗವಂತನ ದಿವ್ಯವಾಣಿಯು ದಿವ್ಯದೇಶವಾಸಿಗಳೆಲ್ಲರಿಗೂ ಈ ದ್ವಯೈಕನಿಷ್ಠೆಯನ್ನು ನಿಯತವಾಗಿ ತಿಳಿಸುತ್ತದೆ. ಈ ವಾಣಿಯು ಭಗವದ್‌ರಾಮಾನುಜರ ಗದ್ಯತ್ರಯದಲ್ಲಿದೆ.

### ೨. ದ್ವಯನಿಷ್ಠೆಯ ಇತಿಹಾಸ

ದ್ರವಿಡವ್ಯಾಖ್ಯಾನಚಕ್ರವರ್ತಿ ಎನಿಸಿದ ಪೆರಿಯವಾಚ್ಚಾನ್‌ಪಿಳ್ಳೈ ಎಂಬ ಆಚಾರ್ಯರ ಶಿಷ್ಯರಾಗಿದ್ದು, **ಪಿನ್ಬಳಿಯ ಪೆರುಮಾಳ್ ಜೀಯರ್** ಎಂಬ ಮುನಿವರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದ, ತಿರುನಾರಾಯಣಪುರದ **ಕಂದಾಡೈ ಕೃಷ್ಣಕುಮಾರಯ್ಯನ್ ಸ್ವಾಮಿಯವರ ವಾರ್ತಾಮಾಲೈ** ಎಂಬ ಗ್ರಂಥದಲ್ಲಿ ಈ ದ್ವಯನಿಷ್ಠೆಯ ಬಗ್ಗೆ ಐವತ್ತಕ್ಕೆ ಕಡಿಮೆಯಿಲ್ಲದೆ ವೃತ್ತಾಂತಗಳು ನಿರೂಪಿತವಾಗಿವೆ. ಇವುಗಳಲ್ಲಿ ಪ್ರಾಚೀನವಾದ ಈ ಒಂದು ಉಲ್ಲೇಖವು ಇಲ್ಲಿ ಗಮನಾರ್ಹವಾಗಿದೆ :-

ಒಮ್ಮೆ ಭಗವದ್‌ರಾಮಾನುಜರ ಶಿಷ್ಯರಲ್ಲಿ (ಪ್ರಧಾನರಾಗಿದ್ದ **ನಡುವಿಲ್ ಆಳ್ವಾನ್** ಎಂಬ ಆಚಾರ್ಯರ ಮಕ್ಕಳಲ್ಲಿ **ನಾರಾಯಣ** ಎಂಬ) ಒಬ್ಬನು, ಭಗವದ್‌ರಾಮಾನುಜರಿಂದ

ದ್ವಯೋಪದೇಶವನ್ನು ಪಡೆದಿದ್ದು; ವೈದಿಕ ಮತಾಂತರಸ್ಥರ ಸಹವಾಸದಿಂದ ಏಕಾಯನ ನಿಷ್ಠೆಯನ್ನು ಪಡೆದು, ದ್ವಯನಿಷ್ಠೆಯನ್ನು ಬಿಟ್ಟುಬಿಟ್ಟನು. ಇದನ್ನು ತಿಳಿದ ರಾಮಾನುಜರು ಒಮ್ಮೆ ಅವನು ಶ್ರೀರಙ್ಗನಾಥನ ಉತ್ಸವದಲ್ಲಿ ದರ್ಶನಕ್ಕಾಗಿ ಬಂದುನಿಂತಿದ್ದಾಗ ಕಂಡು ಹೇಳಿದರಂತೆ. "ಅಪ್ಪಾ! ದ್ವಯಮಂತ್ರನಿಷ್ಠೆ ಎಂತಹುದೆಂದು ಅದರ ಮಹಿಮೆಯನ್ನು ನಾನು ಎಲ್ಲ ಗ್ರಂಥಗಳಲ್ಲೂ ಪ್ರಮಾಣಾಧಾರಪೂರ್ವಕ ಸ್ಪಷ್ಟವಾಗಿ ನಿರೂಪಿಸಿರುವೆನು. ಅದೆಲ್ಲವನ್ನೂ ಅಧ್ಯಯನಮಾಡಿ, ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುವಷ್ಟು ಜ್ಞಾನದ ಪೂರ್ಣತೆ ನಿನಗಿಲ್ಲ. ಆದರೂ ಏನೂ ಕೊರತೆಯಾಗದು. ನಿನಗೆ ದೇವರ ಅನುಗ್ರಹದಿಂದ ಅವರ ಪಾದಸ್ಪರ್ಶದಿಂದ ಅಂತಹ ಜ್ಞಾನವು ಉಂಟಾಗುವುದು. ಇದನ್ನು ನಂಬು". ಹೀಗೆ ಹೇಳಿ ದೇವರ ಶ್ರೀಶಠಾರಿ ಎಂಬ ಗೋಪುರಾಕಾರವಾದ ಪಾದುಕೆಗಳನ್ನು ಅವನ ಶಿರಸ್ಸಿನಲ್ಲಿ ತಾವೇ ಧಾರಣೆ ಮಾಡಿರಂತೆ. ಇದರಿಂದಾಗಿ ಅವನಿಗೆ ವಿಶೇಷ ಜ್ಞಾನೋದಯವಾಗಿ ದ್ವಯನಿಷ್ಠೆಯಲ್ಲೇ ಇದ್ದನಂತೆ.

### ೩. ಅರ್ಥಪಂಚಕವೇ ದ್ವಯಾರ್ಥ

ಈ ವೃತ್ತಾಂತದಿಂದ ಭಗವದ್‌ರಾಮಾನುಜರು ತಮ್ಮ ಗ್ರಂಥಗಳಲ್ಲೆಲ್ಲ ಈ ಪ್ರಪತ್ತಿ ಮಂತ್ರವಾದ ದ್ವಯನಿಷ್ಠೆಯನ್ನೇ ಸಾಂಪ್ರದಾಯಿಕವಾಗಿ ನಿರೂಪಿಸಿರುವರೆಂದು ತಿಳಿದು ಬರುತ್ತದೆ. ಉದಾಹರಣೆಗೆ- **ವೇದಾರ್ಥಸಂಗ್ರಹ**ದಲ್ಲಿ ಒಂದೆಡೆ, ಸಕಲ ಶಾಸ್ತ್ರವಿಷಯವೂ **ಅರ್ಥಪಂಚಕ** ಎಂಬ ದ್ವಯಾರ್ಥವೇ ಆಗಿದೆ ಎಂದು ಸ್ಪಷ್ಟಪಡಿಸಿರುವರು. ಈ ಪ್ರಸಂಗ ಹೀಗಿದೆ:-

೧. ಶಾಸ್ತ್ರಕ್ಕೂ ಪ್ರತ್ಯಕ್ಷಾನುಭವಕ್ಕೂ ನೇರ ವಿರೋಧವಿದೆ ಎಂಬುದು ಒಂದು ಪೂರ್ವಪಕ್ಷವಿಚಾರ. ಪ್ರತ್ಯಕ್ಷವು ಭೇದವನ್ನೂ, ಶಾಸ್ತ್ರವು ಅಭೇದವನ್ನೂ ತಿಳಿಸುವುದೇ ಇದಕ್ಕೆ ಮುಖ್ಯ ಕಾರಣ.

೨. ಈ ಪೂರ್ವಪಕ್ಷವು ಸರಿಯಲ್ಲ. ಪ್ರತ್ಯಕ್ಷ ಮತ್ತು ಶಾಸ್ತ್ರಗಳಿಗೆ ವಿಷಯವು ಬೇರೆ ಬೇರೆಯಾಗಿರುವುದರಿಂದ ವಿರೋಧವಿಲ್ಲದಿರುವುದೇ ಇದಕ್ಕೆ ಕಾರಣ.

೩. ಆಕಾಶ-ವಾಯು-ಮುಂತಾದ ಪಂಚಭೂತಗಳು, ಅವುಗಳಲ್ಲಿರುವ ಶಬ್ದ-ಸ್ಪರ್ಶ ಮುಂತಾದ ಗುಣಗಳು, ಅವೆಲ್ಲದರಿಂದ ಕೂಡಿರುವ ಮನುಷ್ಯ ಮುಂತಾದ ಆಕಾರಗಳೆಂಬ ಜಾತಿಗಳು, ಇವುಗಳಲ್ಲಾಗುವ ಚಲನ-ವಲನಗಳ ವೈವಿಧ್ಯ, ಇವುಗಳೊಡನೆ ಕೂಡಿರುವ ಈ ಪದಾರ್ಥಗಳೇ ಪ್ರತ್ಯಕ್ಷಕ್ಕೆ ವಿಷಯ. ಹೀಗೆ ಪ್ರತ್ಯಕ್ಷವು ಭೇದವಿಷಯಕ ಎಂಬುದು ಸರಿ.

೪. ಆದರೆ ಶಾಸ್ತ್ರವು ಅಭೇದವನ್ನು ಮುಖ್ಯವಾಗಿ ತಿಳಿಸುವುದಿಲ್ಲ. ಶಾಸ್ತ್ರವು (೧) ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯಲು ಸಾಧ್ಯವಿಲ್ಲದ, ಪರಮಾತ್ಮನ, ವಿಶೇಷಣಗಳಾದ ಸಕಲ ಗುಣ-ವಿಭೂತಿಗಳನ್ನೂ, (ವಿಭೂತಿ-ಐಶ್ವರ್ಯ-ಆಸ್ತಿ) ಅವನ ವಿಭೂತಿಗಳಾದ ಚಿತ್-ಅಚಿತ್ ವಸ್ತುಗಳ ಪಾರತಂತ್ರ್ಯ-ಸ್ವರೂಪವನ್ನೂ, (೨) ಸಕಲಸ್ವಾಮಿಯಾದ ಪರಮಾತ್ಮನ ಸ್ವರೂಪವನ್ನೂ, (೩) ಅವನನ್ನು ಆರಾಧಿಸುವ ಉಪಾಸನೆ ಮುಂತಾದ ಉಪಾಯಗಳ ರೀತಿಯನ್ನೂ ಸ್ವರೂಪವನ್ನೂ, (೪) ಪರಮಾತ್ಮನನ್ನು ಅನುಭವಿಸಿ ಅವನ ಅನುಗ್ರಹದಿಂದ ಪಡೆಯುವ ವಿಶೇಷರೀತಿಯ ಫಲದ ಸ್ವರೂಪವನ್ನೂ, (೫) ಅವನಿಗೆ ಇಷ್ಟವಿಲ್ಲದುದನ್ನು ಮಾಡಿ, ಅದರಿಂದ ಪಡೆಯುವ ಅವನ ನಿಗ್ರಹದಿಂದಾದ ವಿರೋಧಿಗಳ ಸ್ವರೂಪವನ್ನೂ, (ಹೀಗೆ ಐದು ವಿಷಯಗಳನ್ನು) ತಿಳಿಸುವುದು.

೫. ಹೀಗೆ ಶಾಸ್ತ್ರ-ಪ್ರತ್ಯಕ್ಷಗಳಿಗೆ ವಿಷಯವು ಬೇರೆಬೇರೆಯಾದುದರಿಂದ ಯಾವ ವಿರೋಧವೂ ಇಲ್ಲ.

## ೪. ದ್ವಯಮಂತ್ರದಲ್ಲಿ ಅರ್ಥಪಂಚಕಕ್ರಮ

ಹೀಗೆ ಈ ಪ್ರಸಂಗದಲ್ಲಿ ಅರ್ಥಪಂಚಕ ಎಂದು ಶಬ್ದವನ್ನು ಬಳಸದೆಯೇ ಅರ್ಥಪಂಚಕದ ಸ್ವರೂಪವನ್ನು ಭಗವದ್ರಾಮಾನುಜರು ಸ್ಪಷ್ಟವಾಗಿ ತಿಳಿಸಿರುವರು. ಇವುಗಳಲ್ಲಿ ಸ್ವಸ್ವರೂಪಾದಿ ವಿಶೇಷಣಭಾಗವು ದ್ವಯಮಂತ್ರದ ಶ್ರೀಮತ್ ಮತ್ತು ನಾರ ಎಂಬ ಪದಗಳಲ್ಲಿದೆ. ಪರಸ್ವರೂಪವು ಅಯನಪದದಲ್ಲಿದೆ. ಉಪಾಯಸ್ವರೂಪವು **ಚರಣೌ ಶರಣಂ ಪ್ರಪದ್ಯೇ** ಎಂಬ ಪದಗಳಲ್ಲಿದೆ. ಫಲಸ್ವರೂಪವು **ಶ್ರೀಮತೇ ನಾರಾಯಣಾಯ ನಮಃ** ಎಂಬ ಉತ್ತರವಾಕ್ಯದಲ್ಲಿದೆ. ವಿರೋಧಿಸ್ವರೂಪವು **ನಮಃ** ಎಂಬ ಪದದ **ಮಃ** ಎಂಬುದರಲ್ಲಿದೆ. ಹೀಗೆ ದ್ವಯದಲ್ಲಿ ಅರ್ಥಪಂಚಕದ ಕ್ರಮವನ್ನು ಅರಿತಿರಲು ಸಾಕು. ನಮ್ಮ ಸಲುವಾಗಿ ಉಪಾಯ ಪ್ರಧಾನವಾದುದು ದ್ವಯಮಂತ್ರ.

## ೫. ಶ್ರೀವೈಷ್ಣವ ಪ್ರಸ್ಥಾನತ್ರಯದಲ್ಲೂ ದ್ವಯಾರ್ಥ

ಇದೂ ಅಲ್ಲದೆ ಆಚಾರ್ಯ ವೇದಾಂತದೇಶಿಕರು ತಮ್ಮ ಶ್ರೀಪಾಂಚರಾತ್ರರಕ್ಷಾ ಗ್ರಂಥದಲ್ಲಿ ಮೂರೆಡೆ ತಮ್ಮ ಮತ್ತು ಪೂರ್ವಾಚಾರ್ಯರೆಲ್ಲರ ನಿಷ್ಠೆ ಈ ದ್ವಯಾರ್ಥವಾದ **ಪ್ರಪತ್ತಿನಿಷ್ಠೆ** ಒಂದೇ ಎಂಬುದನ್ನು ತ್ರಿಸ್‌ಸತ್ಯವಾಗಿ ಸ್ಥಾಪಿಸಿರುವರು. **ಉಪೇಯವೂ ಉಪಾಯವೂ ಪರಬ್ರಹ್ಮವೊಂದೇ = ಪರಮಾತ್ಮನನ್ನು ಪಡೆಯಲು ಪರಮಾತ್ಮನೊಬ್ಬನೇ ಮುಖ್ಯ ಸಾಧನ** ಎಂಬುದೇ ಈ ಪ್ರಪತ್ತಿಮಂತ್ರವಾದ ದ್ವಯದ ಮುಖ್ಯಾರ್ಥ. ಈ

ವಿಷಯವನ್ನು ಆಚಾರ್ಯರು ಅಧಿಕರಣಸಾರಾವಳಿಯಲ್ಲಿ ಸ್ವಪ್ರಾಪ್ತೇಸ್ ಸಾಧನಂ ಚ ಸ್ವಯಂ ಇತಿ ಹಿ ಪರಂ ಬ್ರಹ್ಮ ತತ್ರಾಪಿ ಚಿಂತ್ಯಂ ಎಂದು ಸ್ಪಷ್ಟಪಡಿಸಿರುವರು. ಹೀಗೆ ಸಂಸ್ಕೃತ ವೇದಾಂತ ಸಾರವು ಏನೋ; ಅದೇ ದ್ರಾವಿಡ ವೇದಾಂತ ಸಾರವೂ ಆಗಿದೆ. ಇದನ್ನೂ ಆಚಾರ್ಯರು ತಮ್ಮ ದ್ರಮಿಡೋಪನಿಷತ್‌ತಾತ್ಪರ್ಯರತ್ನಾವಳಿಯಲ್ಲಿ ಶ್ರೀಶಂ ಪ್ರಾಹ ಸ್ವಸಿದ್ಧೇಃ ಸ್ವಯಮಿಹ ಕರಣಂ ಸ್ವಪ್ರಬಂಧೇ ಶಠಾರಿಃ ಎಂದು ಸ್ಪಷ್ಟಪಡಿಸಿರುವರು. ಹೀಗೆಯೇ ಉಪದೇಶಗಮ್ಯವಾದ ರಹಸ್ಯತ್ರಯದ ಸಾರವನ್ನೂ ಉಪಾಯಃ ಸ್ವಪ್ರಾಪ್ತೇಃ ಉಪನಿಷದಧೀತಃ ಸ ಭಗವಾನ್; ಪ್ರಸತ್ತ್ಯೈ ತಸ್ಯೋಕ್ತೇ ಪ್ರಪದನನಿದಿಧ್ಯಾಸನಗತೀ ಎಂಬುದಾಗಿ ಸ್ಪಷ್ಟಪಡಿಸಿರುವರು.

### ೬. ದ್ವಯಾರ್ಥದ ಪುಷ್ಟೀಕರಣ

ಸ್ವಯಂ ಸಾಧನವಾದ ಪರಮಾತ್ಮನನ್ನು ನಾವು ಪ್ರಪತ್ತಿ ಮತ್ತು ಧ್ಯಾನಗಳಿಂದ ಅನುಭವಿಸುತ್ತಿರಬೇಕು. ಈ ಅನುಭವದಲ್ಲಿ ಧ್ಯಾನಕ್ಕೆ ತಿರುಮಂತ್ರವೂ ಪ್ರಪತ್ತಿಗೆ ಚರಮಶ್ಲೋಕವೂ ಸಹಾಯಕವಾಗಿದ್ದು ದ್ವಯಾರ್ಥವನ್ನೇ ಪುಷ್ಟೀಕರಿಸುತ್ತವೆ.

ಈ ಅಂಶಗಳನ್ನು ಅನುಸರಿಸಿ ಇಲ್ಲಿ ಶ್ರೀಭಾಷ್ಯಸಹಿತವಾದ ಶ್ರೀವೇದವ್ಯಾಸರ ಬ್ರಹ್ಮಸೂತ್ರಗ್ರಂಥದ ಹದಿನಾರು ಪಾದಗಳಲ್ಲಿರುವ ಅರ್ಥಗಳು, ಕ್ರಮವಾಗಿ ಮಂತ್ರರತ್ನವೆಂಬ ದ್ವಯಮಂತ್ರದ ಅರ್ಥಗಳನ್ನೇ ಒಳಗೊಂಡಿವೆ ಎಂಬ ತಾತ್ಪರ್ಯಾಂಶವನ್ನು ನೂರೈವತ್ತಾರು ಅಧಿಕರಣಾರ್ಥಗಳ ಸಹಾಯದಿಂದ ನಿರೂಪಿಸಲಾಗಿದೆ.

ದ್ವಯಮಂತ್ರಾರ್ಥವೇ ಗಾಯತ್ರೀಮಂತ್ರದಲ್ಲೂ ಇರುವುದು. ದ್ವಯದಲ್ಲೂ ಗಾಯತ್ರಿಯಲ್ಲೂ ಎರಡೆರಡು ವಾಕ್ಯಗಳಿವೆ. ವೈದಿಕಪಾಠಕ್ರಮದಂತೆ ಗಾಯತ್ರಿಯ ಕ್ರಮವಿದೆ. ಸಾರ್ವತ್ರಿಕವಾದ ಅರ್ಥಕ್ರಮದಂತೆ ದ್ವಯದ ಕ್ರಮವಿದೆ. ಇದಿಷ್ಟೇ ಇವುಗಳ ವ್ಯತ್ಯಾಸ.

ಬ್ರಹ್ಮಸೂತ್ರಗಳಲ್ಲಿರುವುದೆಲ್ಲವೂ ಈ ಗಾಯತ್ರಿಯ ಅರ್ಥವೇ. ಶ್ರೀಭಾಷ್ಯದಲ್ಲಿ ಇದರ ಅಕ್ಷರಾಕ್ಷರ ವಿವರಣೆ ಇದೆ. ಈ ಅಂಶವನ್ನು ಆನೀತಾಂ ತು ನಿಜಾಕ್ಷರೈಃ ಎಂಬ ವಾಕ್ಯಭಾಗದಿಂದ ರಾಮಾನುಜರು ತಿಳಿಸಿದ್ದಾರೆ. ಇದನ್ನೇ ಪೂರ್ವಾಚಾರ್ಯರ ಪರಂಪರೆಯಿಂದ ಹೇಳಿದಂತೆ ಕೇಳಿ ಶ್ರುತಪ್ರಕಾಶಿಕಾಚಾರ್ಯರು ವ್ಯಾಖ್ಯಾನದಲ್ಲಿ ವಿವರಿಸಿದ್ದಾರೆ, ನಿಜಾಕ್ಷರೈಃ = ಗಾಯತ್ರೀ + ಅವಯವಭೂತೈಃ ಅಮೃತಾಕ್ಷರೈಃ ಇತಿ ಯಾವತ್ ಎಂದು. ನಿಜ ಎಂದರೆ ಸ್ವಂತ ಎಂದರ್ಥ. ಇಲ್ಲಿ ಇದು ರಾಮಾನುಜರ ಸ್ವಂತದ ಮಾತಲ್ಲ. ಇದು ಪಾರಾಶರ್ಯವಚಸ್ಸುಧಾ. ಹೀಗೆಂದು ಇದು ಪಾರಶರ್ಯವ್ಯಾಸರ ಮಾತೂ ಅಲ್ಲ. ಇದು

ಉಪನಿಷದ್ ದುಗ್ಧಾಬ್ಧಿ ಮಧ್ಯೋದ್ಧೃತ. ಆದುದರಿಂದ ನಿಜ ಎಂದರೆ ನಿತ್ಯ ಎಂದರ್ಥ. ಸ್ವಕೇ ನಿತ್ಯೇ ನಿಜಂ ತ್ರಿಷು ಎನ್ನುತ್ತದೆ ಅಮರಕೋಶ. ಉಪನಿಷತ್ ಎಂಬ ಕ್ಷೀರಸಮುದ್ರವೂ ಸಪ್ತಸಮುದ್ರಗಳಲ್ಲೊಂದಾಗಿರುವಂತೆ, ನಿತ್ಯವಾದ ವೇದರಾಶಿಯ ಒಂದು ಭಾಗವಾಗಿ, ಸಮುದ್ರದಂತೆ ವಿಸ್ತಾರವಾಗಿರುವ ವೇದಗಳಿಗೆಲ್ಲ ಹೆತ್ತತಾಯಿಯಂತಿರುವುದೇ ಗಾಯತ್ರೀಮಂತ್ರ. ಗಾಯತ್ರಿ ವೇದಮಾತೆ. ಈ ಗಾಯತ್ರೀ ಮಂತ್ರದ ಸೂಕ್ಷ್ಮ ಅಂಶಗಳೇ ಅಮೃತವಾಗಿ ಹೊರಹೊಮ್ಮಿವೆ. ಇವೇ ಗಾಯತ್ರಿಯ ನಿಜಾಕ್ಷರಗಳು. ಈ ಭಾವಾರ್ಥವು ವೇದದಲ್ಲಿ ಬರುವ ಕದ್ರೂ-ಸುಪರ್ಣಿ ವೃತ್ತಾಂತದಲ್ಲಿದೆ. ಛಂದೋಮಯನಾದ ಗರುಡನು ನಾಗಾರ್ಥವಾಗಿ ಅಮೃತವನ್ನು ಇಂದ್ರನ ಅಭೇದ್ಯವಾದ ದುರ್ಗದಿಂದ ತಂದ ಬಗೆ ಇಲ್ಲಿ ಉಪಮಾನವಾಗಿದೆ. ಹೀಗೆ ವೇದಸಾರವೂ ಪರಂಜ್ಯೋತಿಯೂ ವೇದಮಾತೆಯೂ ಆದ ಗಾಯತ್ರೀಮಂತ್ರದ ರಹಸ್ಯಾರ್ಥಗಳೇ ಶ್ರೀಭಾಷ್ಯದಲ್ಲಿ ಅಕ್ಷರಾಕ್ಷರಾರ್ಥಸಹಿತವಾಗಿ ಇವೆ ಎಂಬುದು ಸಾಂಪ್ರದಾಯಿಕವಾಗಿ ಇಲ್ಲಿ ತಿಳಿಸಿರುವ ಅಭಿಪ್ರಾಯ. ಶ್ರೀಭಾಷ್ಯತಾತ್ಪರ್ಯರತ್ನಾವಳಿಯಲ್ಲಿ ಈ ಅರ್ಥಗಳನ್ನು ಅಲ್ಲಲ್ಲಿ ದ್ವಯಮಂತ್ರಾನುಸಾರವಾಗಿಯೇ ಸೂಚಿಸಲಾಗಿದೆ. ಸ್ಥಾನಭೇದದಿಂದಲೂ ನಾನಾ ಪ್ರಕರಣಗಳಿಂದ ವಿವಿಧ ರೀತಿಯಲ್ಲಿ ದ್ವಯವನ್ನೂ, ಗಾಯತ್ರಿಯನ್ನೂ, ಸಮನ್ವಯ ಮಾಡಬಹುದಾಗಿದೆಯಾದರೂ, ಇಲ್ಲಿ ಒಂದು ರೀತಿಯನ್ನು ಅನುಸರಿಸಲಾಗಿದೆ. ಉಳಿದ ರೀತಿಗಳನ್ನು ನಮ್ಮ ಬೇರೆ ಬೇರೆ ಪ್ರಬಂಧಗಳಲ್ಲಿ ನೋಡಿ ತಿಳಿಯಬಹುದು.

## ೭. ಬ್ರಹ್ಮಶಬ್ದದ ಅರ್ಥಗಳು

ಶ್ರೀವೈಷ್ಣವ ಸಂಪ್ರದಾಯಕ್ಕೆ ವಿಶೇಷವಾಗಿ ದ್ರಾವಿಡ ಬ್ರಹ್ಮಸೂತ್ರ ಎಂಬ ಗ್ರಂಥವಿದೆ. ಬ್ರಹ್ಮ ಎಂದರೆ ವೇದಕ್ಕೆ ಹೆಸರು. ವೇದಃ ತತ್ತ್ವಂ ತಪಃ ಬ್ರಹ್ಮ ಎಂದು ಅಮರಕೋಶವು ಹೇಳುತ್ತದೆ. ಚೇತನ-ಅಚೇತನ-ಸರ್ವೇಶ್ವರ ಎಂಬ ತತ್ತ್ವತ್ರಯಕ್ಕೂ ಬ್ರಹ್ಮ ಎಂದು ಹೆಸರು. ಈ ತತ್ತ್ವಗಳನ್ನು ತಿಳಿಸುವ ಶಬ್ದಪ್ರಮಾಣವೆನಿಸಿದ ವೇದಕ್ಕೂ ಇದೇ ಹೆಸರು. ವೇದಗಳಲ್ಲಿ ಹೇಳಿರುವಂತೆ ನಾನಾವಿಧ ಕಾಯಕ್ಲೇಶ ರೂಪವಾದ ಅಧ್ಯಯನ, ಜಪ, ಉಪವಾಸ, ಪ್ರಾಣಾಯಾಮ, ಯಜ್ಞ, ಯಾಗಾದಿಗಳು ತಪಸ್ ಎನಿಸಿವೆ. ಇವೂ ಬ್ರಹ್ಮ.

## ೮. ಶರಣಾಗತಿಯೇ ಉತ್ತಮವಾದ ತಪಸ್ಸು

**ತಪ = ಸಂತಾಪೇ** ಎಂಬ ಧಾತುವಿನಿಂದ – ಶರೀರದ ದೋಷಗಳನ್ನು ಬೆವರಿಸಿ ಒಣಗಿಸಿ ಸಿಡಿಸಿ ದೂರಮಾಡುವ ಕ್ರಿಯೆಗಳೆಲ್ಲವೂ ತಪಸ್ಸೇ. ಇದೇ ರೀತಿ **ತಪ = ಆಲೋಚನೇ** ಎಂಬ ಧಾತುವಿನಿಂದ – ಒಳ್ಳೆಯ ರೀತಿಯ ಚಿಂತನೆ ಮಾಡುವುದು,

ಒಳ್ಳೊಳ್ಳೆಯ ಸಂಕಲ್ಪಗಳನ್ನು ಮಾಡುವುದು, ತತ್ವಗಳ ಬಗ್ಗೆ ಧ್ಯಾನ ಮಾಡುವುದು, ಇದೆಲ್ಲವ ತಪಸ್ಸೇ. ಭಗವಂತನು ಜಗತ್ತನ್ನು ಸೃಷ್ಟಿಸಬೇಕೆಂದು ಸಂಕಲ್ಪಿಸುವುದನ್ನು ವೇದವು ತಪಸ್ ಎನ್ನುತ್ತದೆ. ಭಗವಂತನನ್ನು ನಾನಾರೀತಿಯಲ್ಲಿ ಉಪಾಸನೆಮಾಡುವುದೂ ತಪಸ್ಸೇ. ಹೀಗೆ ಉಪನಿಷತ್‌ಗಳಲ್ಲಿ ತಿಳಿಸಿರುವ ಸುಮಾರು ಮೂವತ್ತೆರಡು ವಿಧವಾದ ಬ್ರಹ್ಮ ವಿದ್ಯೆಗಳೂ ತಪಸ್ಸೇ. ಅವುಗಳಲ್ಲಿ ಒಂದಾಗಿ ಪ್ರಧಾನವಾಗಿಯೂ ಇರುವ **ಶರಣಾಗತಿ – ಪ್ರಪತ್ತಿ** ಎಂಬ ನ್ಯಾಸವಿದ್ಯೆಯು ಎಲ್ಲವನ್ನೂ ಮೀರಿದ ಉತ್ತಮವಾದ ತಪಸ್ಸು ಎನ್ನುತ್ತದೆ ಉಪನಿಷತ್ತು. **ತಸ್ಮಾತ್ ನ್ಯಾಸಮೇಷಾಂ ತಪಸಾಂ ಅತಿರಿಕ್ತಂ ಆಹುಃ; ನ್ಯಾಸಃ ಇತಿ ಬ್ರಹ್ಮ.** ನ್ಯಾಸವಿದ್ಯೆಯಲ್ಲಿ ನ್ಯಾಸವೆಂದರೆ ಪರಮಾತ್ಮನೇ ಮುಖ್ಯಾಂಶ. ವಿದ್ಯೆ ಎಂದರೆ ಅವನ ಬಗ್ಗೆ ಉತ್ತಮವಾದ ಅರಿವು ಜ್ಞಾನ. ಇಂತಹ ಉತ್ತಮವಾದ ಜ್ಞಾನದಿಂದಲೇ ಮೋಕ್ಷ ಎಂಬ ಪುರುಷಾರ್ಥ. **ಜ್ಞಾನಾತ್‌ಮೋಕ್ಷಃ** ಎಂಬುದೇ ಸಕಲ ವೇದಾಂತ ಸಿದ್ಧಾಂತ. ಜ್ಞಾನವೆಂದರೆ ಪುಸ್ತಕದಿಂದಾಗುವ ಅರಿವಲ್ಲ, ಧ್ಯಾನದಿಂದ ಪರಮಾತ್ಮದರ್ಶನ ಸಮಾನಾಕಾರವಾಗಿ ಉಂಟಾಗುವ ವಿಶೇಷಜ್ಞಾನ. ಈ ಜ್ಞಾನವು ಪರಮಾತ್ಮನ ಅನುಗ್ರಹದಿಂದ ಉಂಟಾಗುತ್ತದೆ. ನಮ್ಮ ಎಲ್ಲವಿಧ ಪ್ರಯತ್ನಗಳೂ ಇದಕ್ಕಾಗಿ ಅಲ್ಪವೆನಿಸುತ್ತವೆ. ಭಗವಂತನೊಬ್ಬನೇ ನಿಜವಾದ **ಮಹಾತಪಸ್ವಿ. ಮಹಾತಪಾಃ** ಎನ್ನುತ್ತದೆ ಅವನನ್ನು ವಿಷ್ಣುಸಹಸ್ರನಾಮ.

ಅವನೇ ಉಪೇಯು ಮತ್ತು ಅವನೇ ಉಪಾಯು ಎಂಬ **ದೃಢವಾದ ವಿಶ್ವಾಸ ಪೂರ್ವಕವಾದ ಪ್ರಾರ್ಥನೆಯೇ ಮೋಕ್ಷಬಯಸುವವರಿಗೆ ಬೇಕಾಗಿರುವ ನ್ಯಾಸವಿದ್ಯೆ.** ಇದನ್ನು ತಿಳಿಸುವುದೇ **ಮಂತ್ರರತ್ನವೆಂಬ ದ್ವಯಮಂತ್ರ.** ಇದು ನ್ಯಾಸವಿದ್ಯೆಯ ಸರ್ವಜನಯೋಗ್ಯವಾದ ಒಂದು ಪ್ರಕಾರವನ್ನು ತಿಳಿಸಿ ಯಾವುದೇ ವರ್ಣ ಜಾತಿ-ಉಚ್ಚ-ನೀಚ ವರ್ಗೀಕರಣವಿಲ್ಲದೆ ಉಪಯೋಗವಾಗುತ್ತದೆ. ಗಾಯತ್ರೀಮಂತ್ರದ ಎರಡು ವಾಕ್ಯಗಳನ್ನು ಹಿಂದುಮುಂದು ಮಾಡಿ ಅರ್ಥಾನುಸಾರವಾಗಿ ಪದಗಳನ್ನು ಅನ್ವಯಿಸಿ ಪಠಿಸಿದರೆ ಈ ಶರಣಾಗತಿ ಎಂಬ ನ್ಯಾಸವಿದ್ಯೆಗೆ ಸಾರ್ವತ್ರಿಕತೆ ಸಾರ್ವಜನಿಕತೆ ಉಂಟಾಗುತ್ತದೆ. ವೇದಾಧಿಕಾರದ ಜಾತಿಯೆಂಬ ಹುಟ್ಟು, ವರ್ಣ ಎಂಬ ಹುಟ್ಟು ಗುಣಗಳು, ಸಂಸ್ಕಾರವೆಂಬ ಉಪನಯನಾದಿಕ್ರಿಯೆಗಳು, ಇತ್ಯಾದಿ ಯಾವುದೂ ಬೇಕೇಬೇಕೆಂಬ ನಿರ್ಬಂಧ ಇದರಲ್ಲಿ ಇಲ್ಲ. ಸವರ್ಣೀಯರಿಗೂ ವರ್ಣೇತರರಿಗೂ ಮ್ಲೇಚ್ಛರಿಗೂ ಕೂಡ ಈ ಶರಣಾಗತಿತತ್ವಮಾರ್ಗವು **ಪಂಚಸಂಸ್ಕಾರಗಳಿಂದ** ಸಿದ್ಧವಾಗುತ್ತದೆ. ಈ ಸಿದ್ಧಿಯೇ ಶ್ರೀವೈಷ್ಣವತ್ವ. ಇದು ಶ್ರೀಸಂಪ್ರದಾಯ, ಇದರಲ್ಲಿ ಜಗನ್ಮಾತೆಯಾದ ಶ್ರೀಮಹಾಲಕ್ಷ್ಮಿಯು ಭಗವಂತನಾದ ನಾರಾಯಣನ ಶಿಷ್ಯೆಯಾಗಿ,

ಅನಂತರ ವಿಷ್ವಕ್ಸೇನ, ನಮ್ಮಾಟ್ವಾರ್, ನಾಥಮುನಿ ಮುಂತಾದ ಪರಂಪರೆಗೆ ಗುರುವಾಗಿ, ಪುರುಷಕಾರವಾಗಿ ನಿಲ್ಲುತ್ತಾಳೆ. ನಮಗೂ ಭಗವಂತನಿಗೂ ಮಧ್ಯವರ್ತಿಯಾಗಿದ್ದು ಹೊಂದಾಣಿಕೆ ಮಾಡಿಸುವುದೇ ಪುರುಷಕಾರ. ಈ ವಿಶೇಷದಿಂದ ಇದು ಮಹಾತಪಸ್ವಾದ ಶ್ರೀವೈಷ್ಣವಸಂಪ್ರದಾಯ ಎನಿಸಿದೆ.

## ೯. ಆಚಾರ್ಯರ ಹೃದಯ

ಈ ವಿಶೇಷ ಸಂಪ್ರದಾಯವನ್ನು ದ್ರಾವಿಡವೇದವೆನಿಸಿದ ತಿರುವಾಯ್‌ಮೊಜಿ ಎಂಬ ದಿವ್ಯಪ್ರಬಂಧದ ಮೂಲಕ ಈ ಲೋಕಕ್ಕೆ ಅನುಗ್ರಹಮಾಡಿ ಕೊಟ್ಟವರು ನಮ್ಮಾಟ್ವಾರ್. ಇವರು ಪ್ರಪನ್ನಜನಕೂಟಸ್ಥ ಎನಿಸಿ ಶ್ರೀವೈಷ್ಣವಕುಲಧನವಾಗಿ ಶ್ರೀವೈಷ್ಣವಕುಲಪತಿಯಾಗಿ ಈ ಲೋಕದಲ್ಲಿ ಆಚಾರ್ಯರೆಸಿದ್ದಾರೆ. ಇವರು ತಿರುವಾಯ್‌ಮೊಟಿಯಲ್ಲಿ ತಿಳಿಸಿರುವ ವೇದಸಾರವಾದ ಅಭಿಪ್ರಾಯವೇ ಆಚಾರ್ಯ ಹೃದಯ. ಉಪನಿಷತ್‌ಗಳ ಹೃದಯವನ್ನರಿತು ಮಹಾವಿಷ್ಣುವಿನ ಅವತಾರವಾದ ವೇದವ್ಯಾಸ ಮಹರ್ಷಿಯು ಬ್ರಹ್ಮಸೂತ್ರಗ್ರಂಥ ರಚಿಸಿದಂತೆ ರಮ್ಯಜಾಮತೃದೇವ ಎಂಬ ನೈಷ್ಠಿಕ ಬ್ರಹ್ಮಚಾರಿ ಆಚಾರ್ಯರು ಶ್ರೀರಂಗನಾಥನ ಅವತಾರವೆನಿಸಿ ದ್ರಾವಿಡಬ್ರಹ್ಮಸೂತ್ರ ಗ್ರಂಥ ರಚಿಸಿದ್ದಾರೆ. ಉಪನಿಷತ್ತಿನ ಆಯಾಯಾ ಪದಗಳೇ ಬ್ರಹ್ಮಸೂತ್ರದಲ್ಲಿರುವಂತೆ ಆಯಾಯಾ ದಿವ್ಯಪ್ರಬಂಧ, ಆಗಮ. ಇತಿಹಾಸ, ಪುರಾಣ, ಆಚಾರ್ಯಸೂಕ್ತಿಗಳಲ್ಲಿರುವ ಪದಗಳೇ ಈ ದ್ರಾವಿಡಬ್ರಹ್ಮಸೂತ್ರದಲ್ಲಿವೆಯಾಗಿ; ನಾವು ಆ ಪದದಿಂದ ಸೂಚಿತವಾಗುವ ಆ ಪ್ರಕರಣಾರ್ಥವೆಲ್ಲವನ್ನೂ ಗ್ರಹಿಸಬೇಕಾಗಿ; ಸಾಧಾರಣ ಜನರಿಗೆ ಒಂದೇ ಸಲಕ್ಕೆ ಓದಿತಿಳಿಯಲು ಕಷ್ಟವೇ ಸರಿ.

## ೧೦. ಪರಾಶರಭಟ್ಟರ ಅರ್ಥಸಂಗ್ರಹ

ಆದರೆ ಈ ಸಂಪ್ರದಾಯಲ್ಲಿರುವ ಒಟ್ಟು ಅರ್ಥಗಳು ಹತ್ತು ಎಂದು ವಿಂಗಡಿಸಿ ನಮ್ಮಾಟ್ವಾರವರ ತಿರುವಾಯ್‌ಮೊಟಿಯ ಹತ್ತು ಶತಕಗಳ ಕ್ರಮವಾದ ಅರ್ಥಗಳನ್ನೇ ದ್ವಯಮಂತ್ರದೊಡನೆ ಸಮನ್ವಯಿಸಿ ತಮ್ಮ ರಹಸ್ಯತ್ರಯಸಾರವಾದ ಅಷ್ಟಶ್ಲೋಕಿಯ, ನೇತೃತ್ವಂ ಮುಂತಾದ ಶ್ಲೋಕದಲ್ಲಿ ಪರಾಶರಭಟ್ಟರು ತಿಳಿಸಿದ್ದಾರೆ. ಉದಾಹರಣೆಗೆ ನೇತೃತ್ವಂ ಎಂಬ ಪದವು ಭಗವಂತನಿಗೆ ಪತ್ನಿಯಾಗಿ ನಮಗಾಗಿ ಅವನಲ್ಲಿ ಪುರುಷಕಾರ ಎಂಬ ಶಿಫಾರಸ್ – ರೆಕಮಂಡೇಷನ್ ಮಾಡಿ, ನಮ್ಮನ್ನು ಮುನ್ನಡೆಸುವ ಅವನನ್ನೂ ಮುನ್ನಡೆಸುವ ನೇತ್ರಿ ಆಗಿರುವವಳು ಶ್ರೀದೇವಿ ಎಂದು ತಿಳಿಸುತ್ತದೆ. ಆದುದರಿಂದ ಇಂತಹ ಶ್ರೀಮಾನ್ ಆಗಿರುವವನೇ ನಾರಾಯಣ. ಇದು ಭಗವಂತನ ಪರತ್ವವನ್ನು, ಅವನೇ ಪರವಾಸುದೇವನೆಂದು, ಅವನೇ ಸುಪ್ರೀಂ – ಸರ್ವೇಶ್ವರನೆಂದು ವಿವರಿಸಿ ತಿಳಿಸುತ್ತದೆ.

## ೧೧. ವೇದಾಂತಾಚಾರ್ಯರ ಅರ್ಥಸಂಗ್ರಹ

ಇದೇ ಅರ್ಥವನ್ನು ವೇದಾಂತಾಚಾರ್ಯರು ನೇರವಾಗಿ ತಮ್ಮ ದ್ರಮಿಡೋಪನಿಷತ್ ತಾತ್ಪರ್ಯರತ್ನಾವಳಿಯಲ್ಲಿ ತಿಳಿಸಿ ತಿರುವಾಯ್‌ಮೊಳಿಯ ಹತ್ತು ಅರ್ಥಗಳನ್ನು ಪ್ರಕಟಿಸಿರುವರು. ಅವನು ಪರವಾಸುದೇವನಾಗಿ ವೈಕುಂಠದಲ್ಲಿರುವುದರಿಂದ ಮೋಕ್ಷ ಬಯಸಿ ಅಲ್ಲಿ ಹೋಗುವ ಮುಕ್ತ ಜೀವಾತ್ಮಗಳ ಸೇವೆಯನ್ನು ಸ್ವೀಕರಿಸುತ್ತಾ ಅನುಗ್ರಹಿಸುವನು. ನಾವೆಲ್ಲ ಅವನ ಸೇವಕರಲ್ಲವೆ. **ಅವನ್ ತುಯರಱು ಶುಡರಡಿ ತೊಱುದೆಱು** ಎನ್ ಮನನೇ ಎಂಬ ತಿರುವಾಯ್‌ಮೊಳಿಯ ಮೊಟ್ಟಮೊದಲನೆಯ ಹಾಡಿನಲ್ಲೇ ಇರುವ ವಿಷಯ ಇದು ಎನ್ನುತ್ತಾರೆ ವೇದಾಂತಾಚಾರ್ಯರು.

## ೧೨. ಸರ್ವಾರ್ಥಸಮನ್ವಯ

ಹೀಗೆ ಆಚಾರ್ಯರಿಬ್ಬರ ಮಾತಿನಲ್ಲೂ ದ್ವಯಮಂತ್ರ ಮತ್ತು ತಿರುವಾಯ್‌ಮೊಳಿಯ ಅರ್ಥವಿಶೇಷಗಳು ಒಂದಕ್ಕೊಂದು ಪೂರಕವಾಗಿವೆ. ವ್ಯಾಸರ ಬ್ರಮ್ಹಸೂತ್ರದ ಹದಿನಾರು ಪಾದಗಳ ಅರ್ಥಗಳನ್ನು ಹೀಗೆಯೇ ಸಮನ್ವಯಿಸಿ ತಿಳಿಸುವುದೇ ಈ ಶ್ರೀ ಭಾಷ್ಯ **ತಾತ್ಪರ್ಯರತ್ನಾವಳಿಯ** ಉದ್ದೇಶ. ತಿರುವಾಯ್‌ಮೊಳಿಯ ಮೊದಲನೇ ಶತಕದ ಸಾರಾರ್ಥವೂ, ದ್ವಯಮಂತ್ರದ ಶ್ರೀಮತ್ ಪದಾರ್ಥವೂ, ಬ್ರಹ್ಮಸೂತ್ರದ ವಿದ್ಯಾಪಾದ ದಲ್ಲಿ ದಹರವಿದ್ಯಾ ಪ್ರಕರಣದಲ್ಲೂ, ನೀಲತೋಯದಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ ಎಂಬ ಉಪನಿಷತ್ತಿನಲ್ಲೂ, ಪೆರಿಯಾಳ್ವಾರವರ ತಡವರೈವಾಯ್ ಪಾಶುರದಲ್ಲೂ, ತಿಳಿಸಲಾಗಿದೆ ಎಂಬುದಷ್ಟೇ ಒಂದು ಉದಾಹರಣೆ. ಹೀಗೆ ಇದು ಆಚಾರ್ಯರಾದ ನಮ್ಮಾಳ್ವಾರವರ ಹೃದಯವನ್ನು ತಿಳಿಸುವ ಶ್ರೀಭಾಷ್ಯತಾತ್ಪರ್ಯರತ್ನಾವಳಿ.

## ೧೩. "ಶ್ರೀಮಾನ್ ರಾಮಾನುಜಾರ್ಯಃ" ಪದ್ಯದ ಅರ್ಥ

ಸಂಪ್ರದಾಯ ಗುರುಪರಂಪರ್ಯೈಶ್ವರ್ಯಸಂಪನ್ನರಾದ ಭಗವದ್‌ರಾಮಾನುಜರು ನೂರಾರು ವೇದಾಂತೋಪನಿಷತ್ತುಗಳಿಂದ ಸ್ತುತಿಸಲ್ಪಟ್ಟಿರುವ ಶ್ರೀಶನಾದ ನಾರಾಯಣನನ್ನು ಶ್ರೀಭಾಷ್ಯದಲ್ಲಿ ಬ್ರಹ್ಮಸೂತ್ರಾನುಸಾರ ವಿಶ್ವರೂಪನೆಂದು ತಿಳಿಸುತ್ತಾ ಉಜ್ಜ್ವಲರಾಗಿ ತೋರುತ್ತಾರೆ. ಬ್ರಹ್ಮಸೂತ್ರಗ್ರಂಥದ ಹದಿನಾರು ಪಾದಗಳಲ್ಲೂ ಸೃಷ್ಟಿಕರ್ತೃತ್ವ ಮುಂತಾದ ಒಳ್ಳೊಳ್ಳೆಯ ಗುಣಗಳ ಸಮೃದ್ಧಿಯಿಂದ ಕೂಡಿ ಪ್ರಸಿದ್ಧನಾದ ಅವನನ್ನು ದ್ವಯಮಂತ್ರ ಮತ್ತು ಗಾಯತ್ರೀಮಂತ್ರಗಳೆರಡರ ಪದ ಪದಾರ್ಥಗಳಿಂದ ಉದ್ಭವವಾಗುವ ವಿಶೇಷಾರ್ಥಗಳಿಂದ ಅನುಭವಿಸುತ್ತಾ ಅವನೇ ಸಕಲಫಲಪ್ರದನೆಂದು ಭಾವಿಸೋಣ.

## ೧೪. "ಶ್ರೀಮಾನ್ ಬಂಧುರ್ನರಾಣಾಂ" ಪದ್ಯದ ಅರ್ಥ

೧. ಇವನು ಶ್ರೀಮಂತ ಅಂದರೆ ಸೃಷ್ಟ್ಯಾದಿಗಳನ್ನು ಪಡೆಯುವ ಈ ಜಗತ್ತೆಲ್ಲ ಇವನ ಐಶ್ವರ್ಯ. ೨. ಸಕಲ ಜೀವಿಗಳಿಗೂ ಇವನೇ ಬಂಧು. ೩. ಎಲ್ಲರಿಗೂ ಇವನೇ ಆಸರೆ. ೪. ತಾನು ಎಲ್ಲೆಲ್ಲೂ ವ್ಯಾಪಿಸಿರುವೆನೆಂದು ತ್ರಿವಿಕ್ರಮನಾಗಿ ತೋರಿದವನೇ ಇವನು. ೫. ಶರಣಾಗತರಿಗೆ ಇವನೇ ಬೆಂಬಲವಾಗಿ, ಯಾವುದರಿಂದಲೂ ತನಗೆ ಏನೂ ತೊಂದರೆಯಾಗದಂತಿರುವನು. ೬. ಸನ್ಮಾರ್ಗದಲ್ಲಿ ನಡೆಯುವವರಿಗೆ ಇವನು ಸುಲಭವಾಗಿ ಸಿಗುವನು. ೭. ಎಲ್ಲವನ್ನೂ ತನ್ನ ಶರೀರವನ್ನಾಗಿ ಇಟ್ಟುಕೊಂಡು ಅತಿವಿಶಾಲವಾದ ವಸ್ತುಗಳನ್ನೂ ನಿಯಂತ್ರಿಸುವನು. ೮. ಅಂತೆಯೇ ಅತಿಸೂಕ್ಷ್ಮ ಅಣುಗಳನ್ನೂ ನಿಯಂತ್ರಿಸುವನು. ೯. ಸಂಸಾರಿಗಳೆಲ್ಲರೂ ಇವನ ಬಳಿಯೇ ಸಾರಬೇಕು. ೧೦. ದೋಷಗಳೊಂದೂ ಇಲ್ಲದೆ, ಸದ್ಗುಣ ಪರಿಪೂರ್ಣನು ಇವನು. ೧೧. ಈ ಲೋಕದಲ್ಲಿ ಮಾಡುವ ವಿವಿಧ ಉಪಾಸನೆ ಭಜನೆಗಳ ಮೂಲಕ ಸಿಗುವನು. ೧೨. ಮತ್ತು ಇವನಿಗೆ ಅರ್ಪಿಸಿ ಮಾಡುವ ಕರ್ಮಗಳಿಂದ ಪ್ರಸನ್ನನಾಗುವ ಇವನೇ ನಾರಾಯಣ. ೧೩. ಇವನನ್ನು ನಿರಂತರವಾಗಿ ಸೇವಿಸಿ ನಮಿಸುತ್ತಿದ್ದರೆ ನಮ್ಮ ಪಾಪಗಳನ್ನೆಲ್ಲ ಕಳೆಯುವನು. ೧೪. ಬ್ರಹ್ಮನಾಡಿಯನ್ನು ತೋರಿಸಿ ಶರೀರದಿಂದ ನಮ್ಮನ್ನು ಬಿಡಿಸುವನು. ೧೫. ಅರ್ಚಿರಾದಿ-ದಿವ್ಯಮಾರ್ಗದಲ್ಲಿ ನಮ್ಮನ್ನು ತನ್ನೆಡೆಗೆ ಕೊಂಡೊಯ್ಯುವನು. ೧೬. ನಮ್ಮನ್ನು ತನ್ನೊಡನೆಯೇ ಇಟ್ಟುಕೊಂಡು ಜಗದಂತರ್ಯಾಮಿತ್ವ ಶ್ರಿಯಃಪತಿತ್ವ ಎಂಬೆರಡು ಅಂಶಗಳ ಹೊರತು ಉಳಿದ ತನ್ನ ಎಲ್ಲ ಐಶ್ವರ್ಯವನ್ನೂ ನಮಗೆ ಸ್ವಇಚ್ಛೆಯಂತೆ ನಿತ್ಯಕೈಂಕರ್ಯ ಸಹಿತ ಏರ್ಪಡಿಸಿ ಕೊಟ್ಟು ಕಾಪಾಡುವನು.

## ೧೫. "ಜಿಜ್ಞಾಸ್ಯಂ ಯತ್ ಪ್ರಸಿದ್ಧಂ" ಇತ್ಯಾದಿ ಎರಡು ಪದ್ಯಗಳ ಅರ್ಥ

೧. ಜಿಜ್ಞಾಸೆ ಎಂದರೆ ತಿಳಿಯುವ ಇಚ್ಛೆ. ಯಾವುದನ್ನು ನಾವು ತಿಳಿಯಲು ಆಸೆಪಡಬೇಕೋ ಅದೇ ಈ ಬ್ರಹ್ಮಶಾಸ್ತ್ರದಲ್ಲಿ ಜಿಜ್ಞಾಸ್ಯ ಎನಿಸಿದೆ. ಇದೇ ಪರಬ್ರಹ್ಮ. ಈ ಪರಬ್ರಹ್ಮದ ತೇಜಸ್ಸನ್ನೂ ಅದು ಅದು ಎಂದೇ **ತತ್** ಶಬ್ದದಿಂದ ಗಾಯತ್ರೀಮಂತ್ರದಲ್ಲಿ ತಿಳಿಸಲಾಗಿದೆ. ವೇದೋಪನಿಷತ್ತುಗಳಲ್ಲೂ ಇದೇ ವಿಷಯ. ೨. ಈ ಪರಬ್ರಹ್ಮವೇ ಸಕಲಸೃಷ್ಟಿಗೂ ಸಕಲವಿಧ ಕಾರಣವಾಗಿರುವುದರಿಂದ ಸವಿತಾ ಎನಿಸಿದೆ. ೩. ಇದು ಮಹಾಪುರುಷನಾದುದರಿಂದ ಇವನ ತೇಜಸ್ಸನ್ನೇ ನಾವು ಪಡೆಯಬೇಕಾಗಿದೆ. ಶಾಸ್ತ್ರಗಳ ಸಹಾಯದಿಂದ ಇದನ್ನೇ ನಾವು ಅವಲಂಬಿಸಬೇಕು. ಆದುದರಿಂದ ಇದು ವರೇಣ್ಯ. ೪. ಸಕಲವೂ ಇವನ ಶುಭಕರವಾದ ಶರೀರವೆನಿಸುವುದರಿಂದ

ಇವನ ಈ ದಿವ್ಯರೂಪದ ತೇಜಸ್ಸು ಭರ್ಗಸ್ ಎನಿಸಿದೆ. ೫. ಇವನು ವಿವಿಧವಾದ ದೇವತ್ವವನ್ನು ಪಡೆದಿರುವುದರಿಂದ ಲೀಲಾಜಾಲವಾಗಿ ಬೆಳಗುತ್ತಾ, ನಮ್ಮದಲ್ಲದ ಆಕಾಶ, ನಮ್ಮದಾದ ಇಂದ್ರಿಯಗಳು, ಇವೆಲ್ಲ ಹಿರಿಯ ಕಿರಿಯವನ್ನೂ ತನ್ನ ಪ್ರಜೆಗಳಾದ ನಮ್ಮ ಹಿತಕ್ಕಾಗಿಯೇ ಬಳಸುವುದರಿಂದ; ಇವನಿಗೆ ಏತರಿಂದಲೂ ತೊಂದರೆಯಾಗದು. ೬. ನಾವು ಇಂತಹ ಇವನ ಮಾತನ್ನು ಪಾಲಿಸುತ್ತಾ, ಇತರ ವಿರೋಧಿ ವಿಷಯಗಳಲ್ಲಿ ವೈರಾಗ್ಯದಿಂದಿರುತ್ತಾ, ನಮ್ಮೆಲ್ಲ ಬುದ್ಧಿಯನ್ನೂ ಕೂಡಿಸಿ ಇವನನ್ನೇ ಧ್ಯಾನಿಸುತ್ತಾ ಅಧ್ಯಯನ ಮಾಡೋಣ.

೭. ನಮ್ಮ ಬುದ್ಧಿಗಳಲ್ಲಿ ವಿಶೇಷಗಳನ್ನು ಉಂಟುಮಾಡಿ ತನ್ನನ್ನು ಅನುಭವಿಸುವಂತೆ ಮಾಡುತ್ತಾ; ೮. ಯಾವನು ಈ ಧ್ಯಾನಕ್ಕೆ ಅಂಗವಾದ ಸಹಾಯಕ-ಕರ್ತವ್ಯ ಕರ್ಮಗಳನ್ನೂ, ಧ್ಯಾನಪ್ರಧಾನವಾದ ಉಪಾಸನವನ್ನೂ, ನೆಲೆಗೊಳಿಸುವನೋ; ೯. ಅವನೇ ಈ ಕರ್ತವ್ಯ ನಿರತರಾದ ನಮ್ಮ ಪಾಪಗಳನ್ನೆಲ್ಲ ಹೊಡೆದೋಡಿಸಿ ಅನೇಕ ಫಲಿತಾಂಶಗಳನ್ನು ನೆಲೆಗೊಳಿಸುವನು. ೧೦. ಅವನೇ ನಮಗೆ ಬ್ರಹ್ಮನಾಡೀ ಜ್ಞಾನವನ್ನೂ, ಅರ್ಚಿರಾದಿ ದಿವ್ಯಮಾರ್ಗವನ್ನೂ, ತನ್ನ ಸಾಯುಜ್ಯ ವೆಂಬ ಅಂತರಂಗಾನುಭವಸೇವಾಭಾಗ್ಯವನ್ನೂ ಪ್ರಚೋದಿಸುವನು. ಇಂತಹ ಇವನ ತೇಜೋರೂಪವಾದ ದಿವ್ಯಮಂಗಳ ವಿಗ್ರಹವನ್ನು ನಿತ್ಯವೂ ನಾವು ಧ್ಯಾನಿಸೋಣ ಎಂದು ಗಾಯತ್ರೀಮಂತ್ರದ ಎರಡುವಾಕ್ಯಗಳ ಅನ್ವಯಾರ್ಥ.

## ೧೬. "ವಿದ್ಯಾಪಾದಾರ್ಥಗೋ ಯಃ" ಇತ್ಯಾದಿ ಎರಡು ಪದ್ಯಗಳ ಅರ್ಥ

೧. ಬ್ರಹ್ಮಸೂತ್ರಗ್ರಂಥದ ಮೂರನೆಯ ಅಧ್ಯಾಯದ ವಿದ್ಯಾಪಾದದಲ್ಲಿ ತಿಳಿಸಿರುವಂತೆ ಪ್ರಸಿದ್ಧವಾದ ಮಹತ್ತಾದ ಗುಣಗಳಿಗೆ ಏಕಾಶ್ರಯನಾಗಿ ಎಲ್ಲವನ್ನೂ, ನಿಯಂತ್ರಿಸುತ್ತಾ, ನಮ್ಮೆಲ್ಲರ ಹೃದಯದಲ್ಲೇ ಯಾವನು ಇರುವನೋ, ೨. ಮತ್ತು ಬ್ರಮ್ಹವಿದ್ಯೆಗೆ ಅಂಗವಾದ ಎಲ್ಲ ಕರ್ತವ್ಯ ಕರ್ಮಗಳನ್ನೂ ಇಲ್ಲಿ ನಮಗೆ ವಿಧಿಸಿ ಮಾಡಿಸುತ್ತಾ ಆ ಬ್ರಹ್ಮವಿದ್ಯೆಯನ್ನೂ ಬಲ್ಲವರಾಗುವ ನಮಗೆ ಆತ್ಮಗುಣಪೂರ್ತಿಯನ್ನು ಉಂಟುಮಾಡುತ್ತಾ, ೩. ದೋಷರಹಿತನೂ, ಸದ್ಗುಣೈಶ್ವರ್ಯ ಸಂಪನ್ನನೂ, ಆದ ಯಾವನು ತನ್ನನ್ನು, ಪಡೆಯುವಂತಹ ಅನುಭವವನ್ನು ನಮಗೆ ತಿಳಿಯಪಡಿಸಿ, ೪. ಅವನ ಕೈಂಕರ್ಯ-ಸೇವಾಪರರಾದ ನಮಗೆ ಪುನಃ ಪುನಃ ಧ್ಯಾನ-ಮಂತ್ರಾರ್ಥಾನುಸಂಧಾನ ಪ್ರಕಾರಗಳಿಂದ ವಿದ್ಯೆಯನ್ನು ಸ್ಥಿರಪಡಿಸಿ, ದೇಹವಿಯೋಗಸಮಯದಲ್ಲಾಗುವ-ಉತ್ಕ್ರಾಂತಿ ಊರ್ಧ್ವಗತಿ ಮುಂತಾದ ಸಮಯಗಳಲ್ಲೂ, ತಾನಲ್ಲದ ವಿಷಯಗಳಲ್ಲಿ

ವೈರಾಗ್ಯವನ್ನು ನಮಗೆ ಅನುವರ್ತಿಸಿಕೊಟ್ಟು, ತನ್ನಲ್ಲೇ ಪ್ರೀತಿಮಾಡುವಂತಹ ವಿಶೇಷಾನುಭವವನ್ನು ಉಂಟುಮಾಡುತ್ತಾನೋ;

೫. ಇಂತಹ ಸಕಲಕಾರಣತ್ವದಿಂದ, ಎಲ್ಲೆಲ್ಲೂ ಪೂರ್ಣವಾಗಿ ನೆಲೆಸಿರುವ, ಸಕಲಸೃಷ್ಟಿಕರ್ತನಾದ, ಇವನು; ೬. ಶ್ರಿಯಃಪತಿಯಾಗಿರುವ ಕಾರಣ ನಮಗೆ ಫಲಸಾಧನೆಗೆ ಉಪಕರಣವಾಗಿ ಉಪಾಯವೆನಿಸಿ ಫಲದೊಡನೆ ನಮ್ಮನ್ನು ಕೂಡಿಸುವವನಾಗಿ, ಯಾವ ಅಡೆತಡೆಯೂ ಇಲ್ಲದೆ ತನ್ನ ಆಶ್ರಿತರಿಗೆ ಆಪ್ತನಾಗಿ, ಹಿರಿಯ ಕಿರಿಯ ಸಕಲ ವಸ್ತು ವ್ಯವಹಾರಗಳನ್ನೂ ಲೀಲಾಜಾಲವಾಗಿ ನಿರ್ವಹಿಸುತ್ತ, ದೇವನೆನಿಸಿರುವನೋ; ೭. ನಾವು ಪ್ರೀತಿಯಿಂದ ಬೇಕೆಂದು ಹರಕೆ ಮಾಡುಕೊಳ್ಳುವ, ೮. ಅವನ ಆ ವೇದಪ್ರಸಿದ್ಧವಾದ, ದಿವ್ಯವಾದ, ೯. ಮತ್ತು ವಿಶ್ವಪ್ರಳಯದಲ್ಲೂ ಏಕರೂಪವಾಗಿ, ಸ್ಥಿರವಾಗಿರುವ, ತೇಜೋಮಯವಾದ, ರೂಪವನ್ನು; ೧೦. ನಿತ್ಯೋಜ್ಜ್ವಲವಾಗಿ ಅನುಭವಿಸೋಣ. ಇದು ದ್ವಯ ಮಂತ್ರದ ಕ್ರಮವಾದ ಅರ್ಥ.

### ೧೭. ಶ್ರೀಭಾಷ್ಯತಾತ್ಪರ್ಯರತ್ನಾವಳೀಗ್ರಂಥ

ಗಾಯತ್ರಿಯು ಎಲ್ಲ ಸಂಪ್ರದಾಯದ ವೈದಿಕ ವೇದಾಂತಿಗಳಿಗೂ ಸಮಾನವಾದುದು. ದ್ವಯಮಂತ್ರವು ಕಠಶಾಖೆಯ ವೇದೋಪನಿಷತ್ತುಗಳಲ್ಲೇ ಇದ್ದರೂ ಇದರ ವಿಶಿಷ್ಟವಾದ ಉಪದೇಶ ಸಂಪ್ರದಾಯವನ್ನು ರಾಮಾನುಜರು ಉದ್ಧರಿಸಿರುವುದರಿಂದ ಇದನ್ನು ರಾಮಾನುಜೀಯರು ವಿಶೇಷವಾಗಿ ಅನುಸಂಧಾನ ಮಾಡುವುದು ಆವಶ್ಯಕ.

ಹೀಗೆ ಹದಿನಾರು ಪಾದಾರ್ಥಗಳಲ್ಲಿ ಹತ್ತು ಗಾಯತ್ರೀದ್ವಯಾರ್ಥಗಳನ್ನು ವಿಂಗಡಿಸಿ, ಮೂವತ್ತು ಸ್ರಗ್ಧರಾವೃತ್ತದ ಪದ್ಯಗಳಲ್ಲಿ ತಿಳಿಸುವುದೇ ಈ ಶ್ರೀಭಾಷ್ಯತಾತ್ಪರ್ಯ ರತ್ನಾವಳಿ. ಇದನ್ನು ಅನುಸರಿಸಿ ಸಮಸ್ತ-ಬ್ರಹ್ಮಸೂತ್ರ-ಶ್ರೀಭಾಷ್ಯವೂ ದ್ವಯಾರ್ಥದ ಮೂಲಕ ದ್ವಯೈಕನಿಷ್ಠೆಯನ್ನೇ ಪ್ರತಿಪಾದಿಸುತ್ತದೆ ಎಂದು ಸಹೃದಯರು ತಿಳಿಯಲು ಅನುಕೂಲವಿದೆ. ಇದಕ್ಕಾಗಿ ಅಧಿಕರಣ-ಪಾದ-ಗಾಯತ್ರೀದ್ವಯಾರ್ಥ-ಸಮನ್ವಯ ಚಕ್ರವನ್ನು ಅನುಬಂಧದಲ್ಲಿ ಕೊಡಲಾಗಿದೆ.

### ೧೮. ರಾಮಾನುಜಾರ್ಯದಿವ್ಯಾಜ್ಞೆ.

ಇಲ್ಲಿ ಶ್ರೀಭಾಷ್ಯಾಧ್ಯಯನ ಸಾಧ್ಯವಿಲ್ಲದವರಿಗೆ ದ್ವಯಾರ್ಥ ನಿಷ್ಠೆಯೇ ಸಾಕು ಎಂಬ ಭಗವದ್ರಾಮಾನುಜರ ಅಂತಿಮ ದಿವ್ಯಾಜ್ಞೆಯೂ ಅತ್ಯಾವಶ್ಯಕವಾಗಿ ಗಮನಾರ್ಹವಾಗಿದೆ. ಪಿನ್ಬಟಿಹಿಯಪೆರುಮಾಳ್‌ಜೀಯರ್ ಎಂಬ ಯಚ್ಚಾನ್‌ವಂಶದ ಆಚಾರ್ಯರ

ಗುರುಪರಂಪರಾಪ್ರಭಾವ ಗ್ರಂಥದಲ್ಲಿ ಸಂಗೃಹೀತವಾದ ಸೂಕ್ತಿಪದ್ಯಗಳು ಎರಡು ಹೀಗಿವೆ.

[೧]ಪಠಿತ್ವಾ ಭಾಷ್ಯಂ ತತ್ ಪ್ರವಚನಂ; [೨]ಅಶಕ್ತೌ ಶಠರಿಪೋಃ
ಗಿರಿ ಶ್ರದ್ಧಾ ತದ್ವತ್; [೩] ಪ್ರಭುಪರಿಚಿತಸ್ಥಾನನಿವಹೇ- |
ಪ್ರಭೋಃ ಕೈಂಕರ್ಯಂ ವಾ; [೪] ಪ್ರಪದನಮನೋಃ ಅರ್ಥಮನನಂ;
[೫]ಪ್ರಪನ್ನಾನಾಂ ವಾ ಮೇ ಭವತು ಪರಿಚರ್ಯಾ ಪರಿಚಯಃ; ||

[೬] ಕುಟೀಂ ಕೃತ್ವಾ ತಸ್ಮಿನ್ ಯದುಗಿರಿತಟೇ ನಿತ್ಯವಸತಿಃ;
ಷಡರ್ಥಾಃ ಶ್ರೀಶಸ್ಯ ಪ್ರಪದನವಿಧೌ ಸಾಧಕತಮಾಃ |
ಇತಿ ಶ್ರೀಮಾನ್ ರಾಮಾನುಜಮುನಿರವಾದೀತ್ ಪ್ರಿಯಹಿತಂ
ಸಮೇಷಾಂ ಶಿಷ್ಯಾಣಾಂ ಪರಮಪದಸೋಪಾನಮಿವ ಯನ್ || ಹೀಗೆ:-

'ಸರ್ವದೇಶ-ದಶಾ-ಕಾಲೇಷು ಅವ್ಯಾಹತ-ಪರಾಕ್ರಮಾ |
ರಾಮಾನುಜಾರ್ಯದಿವ್ಯಾಜ್ಞಾ ವರ್ಧತಾಂ ಅಭಿವರ್ಧತಾಮ್ || ೧

'ರಾಮಾನುಜಾರ್ಯದಿವ್ಯಾಜ್ಞಾ ಪ್ರತಿವಾಸರಂ ಉಜ್ವಲಾ |
ದಿಗಂತವ್ಯಾಪಿನೀ ಭೂಯಾತ್ ಸಾ ಹಿ ಲೋಕಹಿತೈಷಿಣೀ || ೨

ಎಂಬ ಕೂರತ್ತಾಳ್ವಾನ್ ಮತ್ತು ಮುದಲಿಯಾಣ್ಡಾನ್ ಅವರ ಎರಡು ಶ್ರೀಸೂಕ್ತಿಗಳಿಂದಲೇ ಈ ಭೂಮಿಕೆಯನ್ನು ಪೂರ್ಣಗೊಳಿಸುತ್ತಿದ್ದೇನೆ.

೧೯. ಗ್ರಂಥರಚನ ಸಮಯ

ಶ್ರೀಭಾಷ್ಯಾಮೃತಸಾಗರ ಎಂದು ಪ್ರಸಿದ್ಧರಾಗಿದ್ದ ಸೋಮಾಶಿಯಾಣ್ಡಾರ್ ಇವರ ೯೦೧ನೇ ತಿರುನಕ್ಷತ್ರ ಶ್ರೀಭಾವಸಂವತ್ಸರ ಮಿಥುನಾಷಾಢ ಶುದ್ಧ ಪಂಚಮೀ ಬುಧವಾರ ಪುಬ್ಬಾನಕ್ಷತ್ರ ಹಗಲು ಅಭಿಜಿತ್ ಸಮಯ.

ಇಂತು ವಿಜ್ಞಾಪಕ

ಶ್ರೀರಾಮಾನುಜದಾಸಾನುದಾಸ, ಅರ್ಯೆಯರ್ ಶ್ರೀರಾಮಶರ್ಮಾ.

ಸ್ಥಳ: ತಿರುನಾರಾಯಣಪುರಂ ಮೇಲುಕೋಟೆ ಸ್ವಗೃಹ.

ಶ್ರೀಮತೇ ರಾಮಾನುಜಾಯ ನಮಃ

# ೨೦. ಬ್ರಹ್ಮಸೂತ್ರ-ಗಾಯತ್ರೀ-ದ್ವಯಮಂತ್ರ- ಸಾರಾರ್ಥ -ಚಕ್ರ

| ಪಾದ | ಪಾದಾರ್ಥ | ಗಾಯತ್ರೀ | ದ್ವಯ | ವಿವರಣೆ | ಸಾರಾವಳಿ | |
|---|---|---|---|---|---|---|
| ೧ | ಶ್ರೀಮಾನ್ | ತತ್ | ಶ್ರೀಮತ್ | ಇವನು ಶ್ರೀವಿಷ್ಣುವಾದವನು. | ಸ್ರಷ್ಟಾ | ೧ |
| ೨ | ಬನ್ಧುರ್ನರಾಣಾಂ | ಸವಿತುಃ | ನಾರ | ಅಕ್ಷಯವಾದ ಜೀವಾತ್ಮರಿಗೆ ಬಂಧು. | ದೇಹೀ | ೨ |
| ೩ | ಅಯನಮಿಹ | ವರೇಣ್ಯಂ | ಅಯನ | ಆಸರೆಯಾಗಿ ನಿಲ್ಲುವವನು | ಸ್ವನಿಷ್ಠಃ | ೩ |
| ೪ | ವಿಭುರ್ವಿಕ್ರಮಶ್ರೀಃ | ಭರ್ಗಃ | ಚರಣೌ | ವ್ಯಾಪಕನಾಗಿ ಮೂರು ಲೋಕವನ್ನೂ ತನ್ನ ಚರಣಗಳಿಂದ ಅಳೆದಂತಹ ಸಾಮರ್ಥ್ಯವುಳ್ಳವನು. | ನಿರವಧಿ - ಮಹಿಮಾ | ೪ |
| ೫ | ನಿರ್ಬಾಧಃ ಶರಣ್ಯಃ | ದೇವಸ್ಯ | ಶರಣಂ | ಅಂತಹ ಚರಣಗಳಲ್ಲಿ ಶರಣಾಗತರಾದವರಿಗೆ ಆಶ್ರಯನಾದ ಇವನು ಯಾವ ಮತದರ್ಶನಗಳಿಂದಲೂ ಯಾವ ಬಾಧೆಯೂ ಇಲ್ಲದವನು. | ಅಪಾಸ್ತ- ಬಾಧಃ | ೫ |
| ೬ | ನೀತಿಗಮ್ಯಃ ಶರಣ್ಯಃ | ದೇವಸ್ಯ | ಶರಣಂ | ಸನ್ಮಾರ್ಗ ಪ್ರವರ್ತಕನಾಗಿ ಆ ಸನ್ಮಾರ್ಗದಲ್ಲೇ ಸಿಗುವವನು. | ಶ್ರಿತಾಪ್ತಃ | ೬ |
| ೭ | ಸಕಲವಪುಃ ವ್ಯಾಪಕಾನಾಂ ಇನಃ ಶರಣ್ಯಃ | ದೇವಸ್ಯ | ಶರಣಂ | ಎಲ್ಲವನ್ನೂ ತನ್ನ ಶರೀರವನ್ನಾಗಿ ಮಾಡಿಕೊಂಡು ವಿಶಾಲವಾದ ವಸ್ತುಗಳನ್ನೆಲ್ಲಾ ನಿಯಂತ್ರಿಸುವವನು. | ಖಾತ್ಮಾದೇಃ ಉಚಿತಜನನಕೃತ್ | ೭ |
| ೮ | ಸಕಲವಪುಃ ಅಣೂನಾಂ ಇನಃ ಶರಣ್ಯಃ | ದೇವಸ್ಯ | ಶರಣಂ | ಹೀಗೆಯೇ ಅತಿಸೂಕ್ಷ್ಮವಾದವಸ್ತುಗಳಿಗೆಲ್ಲ ಒಳಹೊಕ್ಕು ಒಡೆಯನಾಗಿರುವವನು. | ಇಂದ್ರಿಯಾದೇಃ ಉಚಿತಜನನಕೃತ್ | ೮ |
| ೯ | ಸಾರ್ಯಃ ಸಂಸಾರಿಭಿಃ | ಧೀಮಹಿ | ಪ್ರಪದ್ಯೇ | ಸಂಸಾರಕ್ಕೆ ಸಿಲುಕಿದವರೆಲ್ಲರಿಗೂ ಪ್ರಪತ್ತಿಯರೀತಿಯಲ್ಲಿ ಆಶ್ರಯಿಸಲು ಅರ್ಹ. | ಸಂಸೃತೌ ತಂತ್ರವಾಹೀ | ೯ |
| ೧೦ | ಸಾರ್ಯಃ ಶ್ರೀಗುಣಃ | ಧಿಯಃ | ಶ್ರೀಮತೇ | ದೋಷವಿಲ್ಲದೇ ಸದ್ಗುಣಗಳಿಂದ ಶ್ರೀಮಂತ. | ನಿರ್ದೋಷ- ತ್ವಾದಿರಮ್ಯಃ | ೧೦ |
| ೧೧ | ಸಾರ್ಯಃಇಹ ಭಜನ್ಯೈಃ | ಯಃ | ನಾರಾಯಣ | ಈ ಲೋಕದಲ್ಲಿ ಮಾಡುವ ವಿವಿಧ ಉಪಾಸನೆ ಸೇವೆಗಳ ಮೂಲಕ ಸಿಗುವಂತಹವನು. | ಬಹುಭಜನ ಪದಂ | ೧೧ |
| ೧೨ | ಸಾರ್ಯಃ ಚೈವ ನಾರಾಯಣೋಽಸೌ ತಾದರ್ಥ್ಯಾತ್ | ನಃ | ಆಯ | ಮತ್ತು ಅವನಿಗೆ ಅರ್ಪಣೆ ಮಾಡುವ ಕರ್ಮಗಳಿಂದ ಪ್ರಸನ್ನನಾಗುವ ಇವನು ನಾರಾಯಣ. | ಸ್ವಾರ್ಹಕರ್ಮ ಪ್ರಸಾದ್ಯಃ | ೧೨ |
| ೧೩ | ನಿತ್ಯನಮ್ಯಃ ನಿರಘಧಾತಾ | ಪ್ರಚೋದಯಾತ್ | ನಮಃ | ಇವನನ್ನು ನಿರಂತರವಾಗಿ ಸೇವಿಸುತ್ತಿದ್ದರೆ ನಮ್ಮ ಪಾಪಗಳನ್ನೆಲ್ಲ ಕಳೆಯುವವನು. | ಪಾಪಚ್ಛಿತ್ | ೧೩ |
| ೧೪ | ನಿತ್ಯನಮ್ಯಃ ಧಮನಿದ್ವಗ್‌ಧಾತಾ | ಪ್ರಚೋದಯಾತ್ | ನಮಃ | ಬ್ರಹ್ಮನಾಡಿಯನ್ನು ತಿಳಿಸಿ ಶರೀರದಿಂದ ನಮ್ಮನ್ನು ಬಿಡಿಸುವವನು. | ಬ್ರಹ್ಮನಾಡೀ ಗತಿಕೃತ್ | ೧೪ |
| ೧೫ | ನಿತ್ಯನಮ್ಯಃ ಕ್ರಾಂತಿಧಾತಾ | ಪ್ರಚೋದಯಾತ್ | ನಮಃ | ಅರ್ಚಿರಾದಿ ಮಾರ್ಗದಲ್ಲಿ ನಮ್ಮನ್ನು ತನ್ನೆಡೆಗೆ ಕೊಂಡೊಯ್ಯುವವನು. | ಅತಿವರ್ಹ | ೧೫ |
| ೧೬ | ನಿತ್ಯನಮ್ಯಃ ಸಂಪತ್ತಿಧಾತಾ | ಪ್ರಚೋದಯಾತ್ | ನಮಃ | ನಮ್ಮನ್ನು ತನ್ನೊಡನೆ ಇಟ್ಟುಕೊಂಡು ಜಗದ್ವ್ಯಾಪಾರ-ಶ್ರಿಯಃಪತಿತ್ವ ಹೊರತು ತನ್ನ ಸಮಸ್ತೈಶ್ವರ್ಯವನ್ನೂ ನಮಗೆ ಸ್ವಇಚ್ಛೆಯಂತೆ ಕೊಟ್ಟು ಕಾಪಾಡುವವನು. | ಸಾಮ್ಯದಃ ಚ ಅತ್ರ ವೇದ್ಯಃ | ೧೬ |

ಇತಿ ವಿಜ್ಞಾಪಕಃ ತಿರುನಾರಾಯಣಪುರಂ ಅರ್ಯೆಯರ್ ಶ್ರೀರಾಮಶರ್ಮಾಸ್ವಾಮಿ ೧೯.೭.೧೯೯೪ ಪ್ರಥಮೈಕಾದಶೀ

ನಮೋ ವ್ಯಾಸಾಯ ವಿಷ್ಣವೇ - ಶ್ರೀಮತೇ ರಾಮಾನುಜಾಯ ನಮಃ

**चित्राणि 1-2-3-4** — पृष्ठम्


| | | |
|---|---|---|
| श्रीभाष्यतात्पर्यरत्नावळिः | अन्तरङ्गम् | 17-20 |
| **1. भूमिका** | | 21-22 |
| **2. ब्रम्हसूत्र-श्रीभाष्य-शास्त्ररत्न-परिचयः** | | 22 |
| **3. मन्त्रद्वयवेद्यार्थसमन्वयः** | | 22 |
| 1) षोडशपादार्थाः | | 22 |
| 2) गायत्र्याः पाठक्रमेण ब्रह्मसूत्रर्थाः | | 22 |
| 3) गायत्र्याः अन्वयक्रमेण ब्रह्मसूत्र-गाधासहस्त्र-द्वयार्थ- समन्वयः | | 23-25 |
| **4. श्रीभाषयतात्पर्यरत्नावळिः** | **1 सिध्दद्विकम्-विषयद्विकम् विशिष्टं तत्त्वम्** | 23 |
| 1-1 तत्, श्रीमत्, स्रष्टा, श्रीमान् | | 23 |
| 1-2 सवितुः, नार, देही, बन्धुर्नराणां | | 23 |
| 1-3 वरेण्यं, अयन, स्वनिष्ठः, अयनमिह | | 23 |
| 1-4 भर्गः, चरणौ, निरवधिमहिमा, विभुर्विक्रमश्रीः | | 24 |
| 2-1 देवस्य, शरणम्, अपास्तबाधः, निर्बाधः शरण्यः | | 24 |
| 2-2 देवस्य, शरणम्, श्रितास्सः, नीतिगम्यः शरण्यः | | 25 |
| 2-3 देवस्य, शरणम्, खात्मादेः अुचितजननकृत्, सकलवपुरिनो व्यापकानां शरण्यः | | 25 |
| 2-4 देवस्य, शरणम्, अिन्द्रियादेः अुचितजननकृत्, सकलवपुरिनः अणूनां शरण्यः | | 25 |
| | **2 साध्यद्विकम्-विषयिद्विकम् - सफलं अुपासनम्** | 26-28 |
| 3-1 धीमहि, प्रपद्ये, संसृतौ तन्त्रवाही, सार्यः संसारिभिः | | 26 |
| 3-2 धियः, श्रीमते, निर्दोषत्वादिरम्यः, सार्यः श्रीगुणः | | 26 |
| 3-3 यः, नारायण, बहुभजनपदं, सार्यः अिह भजनैः | | 26 |
| 3-4 नः, आय, स्वार्हकर्मप्रसाद्यः, सार्यः चैव नारायणोऽ सौ तादर्थ्यात् | | 27 |
| 4-1 प्रचोदयात्, नमः, पापच्छित्, नित्यनम्यः निरघ-धाता | | 28 |
| 4-2 प्रचोदयात्, नमः, ब्रह्मनाडीगतिकृत्, नित्यनम्यः धमनिदृग्-धाता | | 28 |
| 4-3 प्रचोदयात्, नमः, अतिवहन्, नित्यनम्यः क्रान्ति-धाता | | 28 |
| 4-4 प्रचोदयात्, नमः, साम्यदः चात्र वेद्यः, नित्यनम्यः सम्पत्तिधाता | | 28 |
| **5. निगमनम्** | | 29 |
| **6. श्रीभाष्याचार्यपरम्परावन्दनम्** | | 29 |
| **7. पादार्थः पाद्यतीर्थम्** | | 29 |
| **8. ग्रन्थमाहात्म्यं, प्रयोजनं च** | | 29 |
| **9. पल्लववाक्यम्** | | 30 |
| **10. अनुबन्धः** | 1 प्रमाण-प्रमेय-प्रमातृ-परिचयः | 30 |
| | 2 द्वयार्थदशकविशेषः-विद्यापादार्थः | 30 |
| | 3 विधिमीमांसार्थविशेषः-विद्याङ्गपादार्थः | 30 |
| | 4 गाधासहस्रार्थदशकविशेषः | 30 |
| | 5 अधिकरणसारावळीसारः | 31 |
| | 6 भगवद्रामानुजवैभवम् | 32 |
| | 7 श्रीभाष्याध्ययनप्रयोजनम् | 32 |


**लिपिविशेषाः** अ आ अि अी अु अू अृ अॄ अॆ अे अै अॊ ओ औ ळ ऱ
ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ ಳ ಱ

# Shrishylacharya and Areyar

by Dwaya and Gayathri Acharyas

मेषचित्रासमुद्भूतं वाघूलकुलभूषणम् ।
श्रीशैलार्यमहं वन्दे महागुरुपदे स्थितम् ॥

सिम्हे मघासु सम्भूतं गार्ग्यं विज्ञापकान्वयम् ।
श्रीनिवासनृसिम्हाख्यं ममेमं जनकं भजे ॥

# SRI HAYAGREEVA

ज्ञानानन्दमयं देवं निर्मलस्फटिकाकृतिम् ।
आधारं सर्वविद्यानां हयग्रीवमुपास्महे ॥

: – हयग्रीवस्तोत्ररत्ने भगवतश्शाण्डिल्यस्य

# SRI YOGANARASIMHA



श्रीयादवाद्रि-शृङ्गाग्र-योगानन्दमहाद्भुतम् ।
विश्वत्रातृ-नृसिम्हाख्यं दैवतं पर्युपास्महे ॥

# Sri Yadugiri Yathiraja Swamy

by Sribhashya Acharya



सर्वजिन्मीनहस्तर्क्षे रामानुजपुरोद्भवम् ।
श्रीनिवासाय्यनार्यं तं यतिराजमहं भजे ॥

# श्रीभाष्य-तात्पर्य-रत्नावळिः

## 1. भूमिका

भगवद्रामानुजस्य दर्शने सर्वेऽर्थाः मूलतः मन्त्ररत्नाख्यस्य **द्वयमन्त्रस्य** अर्थैरेव परिपूर्णतां सम्पन्नाः। अयं हि मन्त्रः शरणागतिमन्त्रः अिति प्रसिद्धः। अिमं दीक्षाक्रमेण गुरुमुखात् स्वीकृतवतामेव श्रीभाष्य-भगवद्विषयादि-साम्प्रदायिकग्रन्थानां अुपदेशः अध्ययनं अध्यापनं च क्रमात् सिद्ध्यन्ति। द्वयार्थः एव श्रीवैषणवानां अत्यन्तं मुख्यः। अस्माकं पूर्वाचार्याः सर्वेऽपि द्वयैकनिष्ठाः द्वयार्थानुसारेण आचारविशेषांश्च सुदृढं अनुतिष्ठन्ति च। **द्वयं अर्थानुसन्धानेन सह सदैवं वक्ता यावच्छरीरपातं अत्रैव श्रीरङ्गे सुखमास्स्व** अित्येषा भगवद्वाणी तु सकलदिव्यदेशस्थानामपि अिमां द्वयैकनिष्ठां नियमेन बोधयति। अियं वाणी भगवद्रामानुजस्य गद्यत्रयेऽस्ति।।

'पॆरियवाच्चान्पिळ्ळै' अिति व्यवहृतः श्रीकृष्णार्यः **"द्रविडव्याख्यानचक्रवर्ती"** इति प्रसिद्धः। तस्य शिष्यः पिन्बऴहियपॆरुमाळाख्ययतिवर्यस्य कृपापात्रं तिरुनारायणपुर -कन्दाडैकृष्णकुमारय्यन्-स्वामी तु "वार्तामालै" अितिनामके ग्रन्थे अस्याः द्वयनिष्ठायाः विषये अेकं प्राचीनं अितिहासं द्विवारं अुल्लिखति। यथा

"अेकदा भगवद्रामानुजस्य शिष्येषु (प्रधानस्य नडुविलाऴ्वान् अिति नामकस्य आचार्यस्य पुत्रेषु नारायणनामा) कश्चित् भगवद्रामानुजात् द्वयमन्त्रोपदेशं प्राप्यापि, ततः वैदिकमतान्तरस्थानां एकायनाख्यानां सहवासात् मिथुनायनाख्यां द्वयानिष्ठां त्यक्तवान्।। अेतत् विज्ञाय रामानुजः कदाचित् श्रीरङ्गनाथदेवोत्सवे दर्शनार्थमागतं तं दृष्ट्वा अब्रवीत् - 'भो! आत्मन्! द्वयमंत्रनिष्ठा तु अन्यादृशी अिति तस्याः महिमानं अहं मदीयेषु सर्वेषु ग्रन्थेषु सप्रमाणं सम्यक् निरूपितवानस्मि। तत् सर्वं अधीत्य, हृत्पूर्वकं अङ्गीकृत्य स्थातुं यावती ज्ञानपूर्तिः अपेक्षिता; तावती त्वयि नास्ति। तथाऽपि न किञ्चित् अपहीनम्। तव तु दैवानुग्रहात् देवपादसंस्पर्शसम्बन्धात् तादृशी ज्ञानपूर्तिः भविष्यति। विश्वसिहि'। अिति। अेवमुक्त्वा भगवतः श्रीरङ्गनाथस्य

शठारिनामकं पादुकाद्वयं सपीठगोपुराकारोपरिस्थितं तस्य शिरसि निधाय अनुगृहीतवान् रामानुजः। 'ततश्च तस्य शिष्यस्य ज्ञानोदयः अभूत्। स च तदारभ्य द्वयनिष्ठायामेव स्थिरः अभवत्।"

अनेन वृत्तान्तेन ज्ञायते अिदम् - यत् भगवान् रामानुजः स्वकीयेषु ग्रन्थेषु प्रपत्तिमन्त्ररूपस्य द्वयस्य अर्थनिष्ठामेव सम्प्रदायानुसारेण निरुपितवानस्ति अिति। अेवं द्वयनिष्ठाविषये प्रायः वार्तामालाग्रन्थे पञ्चाशदधिकाः वृत्तान्ताः निरुपिताः सन्ति।

भगवान् रामानुजः प्रायः स्नकीये प्रथमवेदान्तरहस्यग्रन्थे वेदर्थसङ्ग्रहे अेकत्र सकलस्य शास्त्रस्य विषयः अर्थपञ्चकं अिति प्रसिद्धः द्वयार्थः अेव अिति स्पष्टीकृतवान्। यथा-

शास्त्रं तु प्रत्यक्षस्य बाधकं, अिति तयोः विरोधः अस्ति अिति कश्चन पूर्वः पक्षः। तस्य हेतुः प्रत्यक्षं हि भेदस्य ग्राहकं; शास्त्रं तु अभेदस्य ग्राहकं, अिति।। अुत्तरः पक्षस्तु, शास्त्र-प्रत्यक्षयोः विषयभेदात्, विरोधः नास्ति अिति। तथाच -

"आकाश-वायवादि-भूत-तदारब्ध-शब्द-स्पर्शादि-युक्त-मनुष्यत्वादि-संस्थान- संस्थित-पदार्थ-ग्राहि प्रत्यक्षम्; शास्त्रं तु [1]प्रत्यक्षाद्यपरिच्छेद्य-सर्वान्तरात्मत्व-सत्यत्वाद्यनन्त-विशेषण-विशिष्ट- [2]ब्रह्मस्वरुप-[3]तदुपासनाद्याराधन-प्रकार-[4]तत्प्राप्तिपूर्वक-तत्प्रसादलभ्य-फल-विशेष- [5]तदनिष्टकरण मूल-निग्रह-विशेष-विषयम्; अिति शास्त्रप्रत्यक्षयोः न विरोधः" अिति। अत्र अर्थपञ्चकम् अिति कण्ठतः अनुक्त्वाऽपि; अर्थतः तत्पञ्चकस्वरूपं निरूपितम्।।

